ಜಾತಿಯತೆಯ ದೊಡ್ಡ ದೊಡ್ಡ ಕಲೆಗಳಿವೆ. ಈ ಕಲೆಗಳನ್ನು ಅಳಿಸಿದಾಗಲೇ ದೇಶವು 'ಮಹಾನ್' ಆಗುವುದು ಸಾಧ್ಯ. ಎಲ್ಲರೂ ಸೇರಿಯೇ ರಾಷ್ಟ್ರವನ್ನು ಶ್ರೇಷ್ಠವನ್ನಾಗಿ ಮಾಡುವುದು ಸಾಧ್ಯ. ಎಲ್ಲರೂ ಸಮಾನರಾದಾಗಲೇ ದೇಶ ಶ್ರೇಷ್ಠವಾಗಬಲ್ಲದು.

◆ **ಈ ಇಂಟರ್ನೆಟ್ ಯುಗದಲ್ಲಿ ನೀವು ಈ ದಲಿತ ಸಾಹಿತ್ಯದಲ್ಲಿ ಯಾವ ಬಗೆಯ ಬದಲಾವಣೆಯನ್ನು ಕಾಣಬಯಸುತ್ತೀರಿ?**

ಹೌದು, ಎಲ್ಲವೂ ಬದಲಾಗಿದ್ದಂತೂ ಸತ್ಯ. ಎಲ್ಲವೂ ಸುಲಭವಾಗಿ ಬಿಟ್ಟಿದೆ. ಇಂಟರ್ನೆಟ್ ನಮಗೊಂದು ಹೊಸ ಸ್ಪೇಸ್ ನೀಡಿದೆ. ಸಾವಿರಾರು ವರ್ಷಗಳಿಂದ ಯಾವ ಅಭಿವೃದ್ಧಿಯಿಂದ ನಾವು ವಂಚಿತರಾಗಿದ್ದೇವೋ, ಅದು ಇಂಟರ್ನೆಟ್ ಮೂಲಕ ನಮಗೆ ತೆರೆದುಕೊಂಡಿದೆ. ಈಗ ನಾವು ನಮ್ಮ ಮಾತನ್ನು ತಲುಪಿಸಲು ಯಾವುದೇ ಸಾಹಿತ್ಯ ಸಮ್ಮೇಳನದ ಹಾದಿಯನ್ನು ಕಾಯಬೇಕಿಲ್ಲ, ಪುಸ್ತಕವನ್ನು ಅವಲಂಬಿಸಬೇಕಿಲ್ಲ. ಸಾಮಾಜಿಕ ಜಾಲತಾಣಗಳ ಮೂಲಕ ನಿಮ್ಮ ಮಾತನ್ನು ಪ್ರತಿನಿತ್ಯ ಜನರೆದುರು ತೆರೆದಿಡಬಹುದಾಗಿದೆ. ಹಿಂದೆ ನಮ್ಮ ಬರಹ ದೇಶ–ವಿದೇಶಗಳಿಗೆ ತಲುಪಲು ಹಲವಾರು ದಿನಗಳೇ ಬೇಕಾಗುತ್ತಿದ್ದವು. ಈಗ ಹಾಗಿಲ್ಲ. ಕೆಲವೇ ಸೆಕೆಂಡ್‌ಗಳಲ್ಲಿ ದೂರದ ದೇಶಗಳಿಗೂ ತಲುಪುತ್ತದೆ. ಅವರೂ ನಮ್ಮ ಬರಹಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಓದುತ್ತಾರೆ. ನಮ್ಮ ವ್ಯಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ. ನಾನೀಗ ನನ್ನ ಸಾಹಿತ್ಯವನ್ನು ಪ್ರಕಟಿಸಲು ಪ್ರಕಾಶಕರ ಬೆನ್ನು ಹತ್ತಬೇಕಾಗಿಲ್ಲ. ಈಗ ಕ್ರಿಯೆ–ಪ್ರತಿಕ್ರಿಯೆ ಏಕಕಾಲಕ್ಕೆ ನಡೆಯುತ್ತದೆ. ವೆಬಿನಾರ್ ಮೂಲಕ ಮನೆಯಲ್ಲಿ ಕುಳಿತೇ ಜಗತ್ತಿನೊಂದಿಗೆ ಸಂವಾದ ನಡೆಸಬಹುದಾಗಿದೆ. ಇದನ್ನೇ ನಮ್ಮ ಮೂಲಭೂತ ವಿಕಾಸಗಳ ಆಮೂಲಾಗ್ರ ಬದಲಾವಣೆ ಎನ್ನಬಹುದು. ನಾವೀಗ ಹೊರಗಿನ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸನಿಹದಿಂದ ಅರಿಯಬಹುದಾಗಿದೆ. ನೀವು ಜಗತ್ತಿನೊಂದಿಗೆ ಹೆಚ್ಚೆಚ್ಚು ಸಂಪರ್ಕವನ್ನು ಪಡೆದಂತೆ, ನಿಮ್ಮ ವಿಕಾಸವು ಹೆಚ್ಚು ಉತ್ಥಾನವಾಗುತ್ತದೆ. ಆಂಗ್ಲರಿಂದ ನಮ್ಮ ದಲಿತರ ದಾರಿ ಮುಕ್ತಗೊಂಡಿತು. ಹೊರಗಿನ ಸಂಸ್ಕೃತಿ ಬಂದಿರುವುದರಿಂದಲೇ ನಮಗೆ ಬದಲಾವಣೆಯ ಅವಕಾಶ ಪ್ರಾಪ್ತವಾಯಿತು.

◆ **'ಅಕ್ರಮ ಸಂತಾನ' ಎಂಬ ನಿಮ್ಮ ಆತ್ಮಕತೆಯಿಂದ ನೀವು ಭಾರತದ ತುಂಬೆಲ್ಲ ಸಾಕಷ್ಟು ಚರ್ಚೆಗೊಳಗಾಗಿದ್ದೀರಿ, ಇದರ ಬಗೆಗೆ ಏನು ಹೇಳುತ್ತೀರಿ?**

ನಾನು ಕೇವಲ ಮರಾಠಿಯಲ್ಲಿ ಮಾತ್ರ ಬರೆದರೆ ಸಾಕು ಎಂದುಕೊಂಡಿದ್ದರೆ, ನನ್ನನ್ನು ನಿರ್ಲಕ್ಷಿಸಿ ಮುಗಿಸಿ ಬಿಡುತ್ತಿದ್ದರು. ನನ್ನ ಸಾಹಿತ್ಯ ಅನುವಾದಗೊಂಡಿದ್ದರಿಂದ ನನಗೆ ದೇಶ–ವಿದೇಶದ ಮಟ್ಟಕ್ಕೇರುವುದು ಸಾಧ್ಯವಾಯಿತು. ಇಡೀ ಜಗತ್ತಿನಲ್ಲಿಯ ದಲಿತರಲ್ಲಿ ಒಂದು ಬಗೆಯ ಜಾಗೃತಿ ನಿರ್ಮಾಣವಾಗಿದೆ. ಅವರ ಸಮಸ್ಯೆಗಳ ಚರ್ಚೆ ನಡೆಯುತ್ತಲಿದೆ. ಮನುಷ್ಯನ ಹಕ್ಕುಗಳಿಗಾಗಿ ಸಂಘರ್ಷ ನಡೆಯುತ್ತಲಿದೆ. ಈ ಕಾರಣಕ್ಕಾಗಿ ನನ್ನ ಸಾಹಿತ್ಯದ ಕಡೆಗೆ ಗಮನಹರಿದಿದೆ.

◆ **ಮರಾಠಿ ದಲಿತ ಆತ್ಮಕತೆಗಳ ಕಾಲ ಮುಗಿದಿದೆ ಎಂದೆನಿಸುತ್ತದೆಯೇ?**

ಖಂಡಿತವಾಗಿಯೂ ಇಲ್ಲ. ಆತ್ಮಕತೆ ದಲಿತ ಸಾಹಿತ್ಯದ ಆತ್ಮವಿದ್ದಂತೆ. ದಲಿತ ಆತ್ಮಕತೆಗಳು ಯಶಸ್ವಿಯಾಗಿದ್ದರಿಂದ ಇತರರೂ ಆತ್ಮಕತೆಯ ಬರವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ. ವಿಶೇಷವಾಗಿ ಸ್ತ್ರೀವಾದಿ ಲೇಖಕಿಯರು ದೊಡ್ಡ ಪ್ರಮಾಣದಲ್ಲಿ ಬರೆಯುತ್ತಿದ್ದಾರೆ. ಇದು ದಲಿತ ಆತ್ಮಕತೆಗಳ ಯಶಸ್ಸು.